## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮಗಳಲ್ಲಿ ಫಲಾನುಭವಿಗಳಿಗೆ DBT ಮೂಲಕ ಗಂಗಾ ಕಲ್ಯಾಣ ಯೋಜನೆಯನ್ನು ಪಾರದರ್ಶಕವಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ ವ್ಯವಸ್ಥಾಪಕ ನಿರ್ದೇಶಕರು, ಡಾ||ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರ ಪತ್ರಸಂಖ್ಯೆ:ಅಂಅನಿ/ಗಂಕಯೋ/DBT/2022-23/1953,ದಿನಾಂಕ:06.05.2022

* * * **

**ಪ್ರಸ್ತಾವನೆ:**

ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಎಲ್ಲಾ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯನ್ನು ಟೆಂಡರ್ ಮುಖಾಂತರ ಅನುಷ್ಠಾನ ಮಾಡಲಾಗುತ್ತಿದ್ದು, ಅದರಲ್ಲಿ ಕೆಲವು ಕಾರಣಗಳಿಂದ ಅನುಷ್ಠಾನ ಮಾಡುವಲ್ಲಿ ವಿಳಂಬವಾಗುತ್ತಿದೆ ಎಂದು ಗಮನಿಸಲಾಗಿದೆ. ಆದ್ದರಿಂದ, 2022-23ನೇ ಸಾಲಿನಿಂದ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮಗಳಲ್ಲಿ ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲವನ್ನು ನೀಡಿ ಗಂಗಾ ಕಲ್ಯಾಣ ಯೋಜನೆಯನ್ನು ಪಾರದರ್ಶಕವಾಗಿ ತ್ವರಿತವಾಗಿ ಅನುಷ್ಠಾನಗೊಳಿಸಬೇಕಾಗಿದೆ. ಗಂಗಾ ಕಲ್ಯಾಣ ಯೋಜನೆಯನ್ನು ಫಲಾನುಭವಿಗಳಿಗೆ DBT ಮೂಲಕ ಅನುದಾನ ನೀಡಿ ತ್ವರಿತವಾಗಿ ಮತ್ತು ಪಾರದರ್ಶಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಮೇಲೆ ಓದಲಾದ ದಿನಾಂಕ:06.05.2022 ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1. ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಅಲೆಮಾರಿ ಕೋಶ
2. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
3. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
4. ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ
5. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ
6. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ಮೇಲ್ಕಂಡ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯನ್ನು ಫಲಾನುಭವಿಗಳ ಮೂಲಕ DBT ಮುಖಾಂತರ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಸರ್ಕಾರಿ ಆದೇಶ ಹೊರಡಿಸಲು ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಸ್‌ಡಿಸಿ 2022 ಬೆಂಗಳೂರು, ದಿನಾಂಕ:14.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿರುವ ಮೇಲ್ಕಂಡ 6 ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲ ನೀಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

1. Expression of Interest (EoI) ಮೂಲಕ ಕೊಳವೆ ಬಾವಿಗಳನ್ನು ಕೊರೆಯುವ ಅರ್ಹ ಗುತ್ತಿಗೆದಾರರನ್ನು/ಏಜೆನ್ಸಿಗಳನ್ನು Empanelment ಮಾಡುವುದು.

....2

2. Expression of Interest (EoI) ಮೂಲಕ ಕೊರೆದ ಕೊಳವೆ ಬಾವಿಗಳಿಗೆ ಮೋಟರ್ ಮತ್ತು ಪಂಪ್‌ಸೆಟ್‌ಗಳನ್ನು ಅಳವಡಿಸಲು ಅರ್ಹ ಸರಬರಾಜು ಏಜೆನ್ಸಿಗಳನ್ನು Empanelment ಮಾಡುವುದು. ಏಜೆನ್ಸಿಗಳು ಮೋಟರ್ ಮತ್ತು ಪಂಪ್‌ಸೆಟ್‌ಗಳ ಸ್ವಯಂ ಉತ್ಪಾದಕರಾಗಿರಬೇಕು.
3. ಕೊಳವೆ ಬಾವಿ ಕೊರೆಯಲು ಮತ್ತು ಮೋಟರ್ ಹಾಗೂ ಪಂಪ್‌ಸೆಟ್ ಸರಬರಾಜಿಗೆ specifications ಗಳೊಂದಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳನ್ನು ಜಿಲ್ಲಾವಾರು ಅಥವಾ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುವಂತೆ ರಾಜ್ಯ ಮಟ್ಟದಲ್ಲಿ Expression of Interest ಕರೆಯಲು ಡಾಕ್ಯುಮೆಂಟ್‌ಗಳನ್ನು ಸಿದ್ಧಪಡಿಸಿ ಸಲಹಾ ಸಮಿತಿಗೆ ಮಂಡಿಸಿ ಅನುಮೋದನೆ ಪಡೆಯುವುದು. ಅದರಂತೆ ಎಂಪ್ಯಾನೆಲ್‌ಮೆಂಟ್ ಸಮಿತಿಯು ಏಜೆನ್ಸಿಗಳನ್ನು ಎಂಪ್ಯಾನೆಲ್ ಮಾಡಲು ಕ್ರಮವಹಿಸುವುದು.
4. ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳಿಗೆ ಕೊಳವೆಬಾವಿ ಕೊರೆಯಲು ಐಟಂವಾರು (ಕೊಳವೆಬಾವಿ ಕೊರೆಯಲು & ಕೇಸಿಂಗ್ ಪೈಪ್ ಇತ್ಯಾದಿ) ದರ ನಿಗದಿಪಡಿಸುವುದು. ಇದೇ ರೀತಿ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಳನ್ನು ಸರಬರಾಜು ಮಾಡಿ ಅಳವಡಿಸಲು ಒಟ್ಟು ದರ ನಿಗದಿಪಡಿಸುವುದು. Expression of Interest ಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯಂತೆ Two Cover System ಅನ್ನು ಅಳವಡಿಸಿಕೊಳ್ಳುವುದು.
5. ಗಂಗಾ ಕಲ್ಯಾಣ ಯೋಜನೆಯಡಿ ಜಾರಿಯಲ್ಲಿ ಇರುವಂತೆ "No Water No Money" ಷರತ್ತನ್ನು ವಿಧಿಸುವುದು.
6. ಆಯ್ಕೆಯಾದ ಫಲಾನುಭವಿಗಳಿಗೆ ನಿಗಮಗಳಿಂದ ಮಂಜೂರಾತಿ ಆದೇಶ ನೀಡುವುದು ಮತ್ತು ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳ ಪಟ್ಟಿ ಒದಗಿಸುವುದು.
7. ಫಲಾನುಭವಿಗಳು ಎಂಪ್ಯಾನೆಲ್‌ಮೆಂಟ್ ಪಟ್ಟಿಯಲ್ಲಿರುವ ಯಾವುದೇ ಸಂಸ್ಥೆಯ ಮೂಲಕ ಕೊಳವೆಬಾವಿಗಳನ್ನು ಕೊರೆಯಿಸಿಕೊಳ್ಳಬಹುದು ಮತ್ತು ಪಂಪ್‌ಸೆಟ್‌ಗಳನ್ನು ಖರೀದಿಸಬಹುದು.
8. ಕೊಳವೆಬಾವಿಗಳನ್ನು ಕೊರೆದ ಬಗ್ಗೆ ಟಿ.ಡಿ.ಒ/ ಆಯಾ ನಿಗಮದ ಅಧಿಕಾರಿಗಳು ಮತ್ತು ಫಲಾನುಭವಿಗಳು ಜಂಟಿಯಾಗಿ ವಾಸ್ತವವಾಗಿ ಅಳತೆ ಇತ್ಯಾದಿಗಳನ್ನು ಪರೀಕ್ಷಿಸಿ ಬಿಲ್ ಮಾಡಿ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸುವುದು ಮತ್ತು ಸಂಬಂಧಿಸಿದ ನಿಗಮಗಳು DBT ಮೂಲಕ ಪಾರದರ್ಶಕವಾಗಿ ಎಂಪ್ಯಾನೆಲ್‌ಮೆಂಟ್ ಸಮಿತಿಯ ಷರತ್ತಿಗೊಳಪಟ್ಟು ಫಲಾನುಭವಿಗಳಿಗೆ ಪಾವತಿಸುವುದು. ನಂತರ ಫಲಾನುಭವಿಗಳು ಗುತ್ತಿಗೆದಾರರು/ಏಜೆನ್ಸಿಗೆ ಪಾವತಿಸುವ ಬಗ್ಗೆ ನಿಗಮಗಳು ಸೂಕ್ತ ತಂತ್ರಾಂಶ ಅಳವಡಿಸಿಕೊಳ್ಳುವುದು.
9. ಕೊಳವೆಬಾವಿ ಕೊರೆಯಲು ತಗಲುವ ವಾಸ್ತವ ವೆಚ್ಚವನ್ನು ಘಟಕ ಸಹಾಯಧನದಲ್ಲಿ ಭರಿಸುವುದು.
10. ಫಲಾನುಭವಿಗಳಿಗೆ ಕೊಳವೆಬಾವಿಗಳ ಘಟಕ ವೆಚ್ಚದ ಈಗಿರುವ ಮಿತಿಯಂತೆ ಸಹಾಯಧನ ಮತ್ತು ಸಾಲವನ್ನು DBT ಮೂಲಕ ಪಾವತಿಸುವುದು.

....3

11. ಕೊಳವೆಬಾವಿ ಕೊರೆಯಲು ಮತ್ತು ಪಂಪ್‌ಸೆಟ್ ಅಳವಡಿಸಲು ಸೇರಿ ತಗಲುವ ವೆಚ್ಚವು ಸಹಾಯ ಧನ ಮೊತ್ತವನ್ನು ಮೀರಿದಲ್ಲಿ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯು ತನ್ನ ಸ್ವಂತ ಮೂಲ ಅಥವಾ ನಿಗಮದಿಂದ ನೀಡಲಾಗುವ ಅವಧಿ ಸಾಲದ ಮೂಲಕ ಭರಿಸುವುದು.
12. ವಿದ್ಯುದ್ದೀಕರಣ ಮಾಡಲು ಈಗಿರುವಂತೆ ರೂ.50,000/- ಗಳನ್ನು ಸಂಬಂಧಪಟ್ಟ ಎಸ್ಕಾಂಗಳಿಗೆ ಪಾವತಿಸುವುದು.
13. ಈ ಬಗ್ಗೆ ತಂತ್ರಾಂಶ ಅಭಿವೃದ್ಧಿ ಪಡಿಸಿ ಅನುಷ್ಠಾನ ಮತ್ತು ನಿರ್ವಹಣೆ ಮಾಡಲು ತಗಲುವ ವೆಚ್ಚವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಅನುಗುಣವಾಗಿ ಆಯಾ ನಿಗಮಗಳು ಭರಿಸತಕ್ಕದ್ದು.
14. ಗಂಗಾ ಕಲ್ಯಾಣ ಯೋಜನೆಯಡಿ ಸಹಾಯಧನ ಮೊತ್ತವನ್ನು ಫಲಾನುಭವಿಗಳಿಗೆ ಮತ್ತು ಎಂಪ್ಯಾನೆಲ್‌ಮೆಂಟ್ ಏಜೆನ್ಸಿಗಳಿಗೆ ಹಣ ಪಾವತಿಸುವ ಬಗ್ಗೆ ಇ-ಆಡಳಿತ ಇಲಾಖೆಯು ಹೊಸ ತಂತ್ರಾಂಶವನ್ನು ರೂಪಿಸಿದಲ್ಲಿ, ಅದನ್ನು ಅಳವಡಿಸಿಕೊಳ್ಳುವುದು.
15. 2022-23 ನೇ ಸಾಲಿನ ಗಂಗಾ ಕಲ್ಯಾಣ ಗುರಿಗಳೊಂದಿಗೆ, ಹಿಂದಿನ ವರ್ಷಗಳಲ್ಲಿ ಮಂಜೂರಾಗಿ ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳನ್ನು ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲ ನೀಡಿ ಅನುಷ್ಠಾನಗೊಳಿಸುವುದು (ಈಗಾಗಲೇ ಕಾರ್ಯಾದೇಶ ನೀಡಿರುವ ಸಂಖ್ಯೆಯನ್ನು ಹೊರತುಪಡಿಸಿ).
16. ಗಂಗಾ ಕಲ್ಯಾಣ ಯೋಜನೆಯಡಿ ಈ ಕೆಳಕಂಡ Empanelment ಸಮಿತಿಯನ್ನು ರಚಿಸಲಾಗಿದೆ.

| ಕ್ರ ಸಂ | ಅಧಿಕಾರಿ | ಪದನಾಮ |
|---|---|---|
| 1 | ಆಯುಕ್ತರು, ಸಮಾಜ ಕಲ್ಯಾಣ | ಅಧ್ಯಕ್ಷರು |
| 2 | ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು-ಮೇಲ್ಕಂಡ 6 ನಿಗಮಗಳು | ಸದಸ್ಯರು |
| 4 | ಮುಖ್ಯ ಅಭಿಯಂತರರು, ಆರ್.ಡಿ.ಪಿ.ಆರ್ (ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ) | ಸದಸ್ಯರು |
| 5 | ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 6 | ಮುಖ್ಯ ಪ್ರಧಾನ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ Empanelment ಸಮಿತಿ ಕೊಳವೆ ಬಾವಿ ಕೊರೆಯಲು ಮತ್ತು ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡಲು ಪ್ರತ್ಯೇಕವಾಗಿ Expression of Interest ಮುಖಾಂತರ ಅರ್ಹ ಏಜೆನ್ಸಿಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡುವುದು. ದರ ಮತ್ತು Specifications ಗಳ ಬಗ್ಗೆ ಮುಖ್ಯವಾಗಿ ಗಮನಹರಿಸುವುದು. Empanelment ಏಜೆನ್ಸಿಗಳ ಮೂಲಕ ಆಯಾ ನಿಗಮಗಳು ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುವುದು/ಮೇಲ್ವಿಚಾರಣೆ ನಡೆಸುವುದು/ ಮೂರನೇ ಪಕ್ಷಕಾರರಿಂದ ವರದಿ ಪಡೆದು ಪಾವತಿಗೆ ಕ್ರಮವಹಿಸುವುದು.

ಗಂಗಾ ಕಲ್ಯಾಣ ಯೋಜನೆಯನ್ನು ಫಲಾನುಭವಿಗಳಿಗೆ DBT ಮೂಲಕ ಸಹಾಯಧನ ಮತ್ತು ಸಾಲ ನೀಡಿ ಅನುಷ್ಠಾನಗೊಳಿಸುವ ಬಗ್ಗೆ ಮೇಲ್ವಿಚಾರಣೆ ಮಾಡಲು ಈ ಕೆಳಕಂಡಂತೆ ಸಲಹಾ ಸಮಿತಿಯನ್ನು ರಚಿಸಲಾಗಿದೆ.

| ಕ್ರ ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | ಅಧ್ಯಕ್ಷರು |
| 2 | ಆಯುಕ್ತರು, ಸಮಾಜ ಕಲ್ಯಾಣ | ಸದಸ್ಯರು |
| 3 | ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ವ್ಯವಸ್ಥಾಪಕ ನಿರ್ದೇಶಕರು- ಮೇಲ್ಕಂಡ 6 ನಿಗಮಗಳು | ಸದಸ್ಯರು |
| 5 | ಮುಖ್ಯ ಅಭಿಯಂತರರು, ಆರ್.ಡಿ.ಪಿ.ಆರ್ (ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ) | ಸದಸ್ಯರು |
| 6 | ಕಾರ್ಯನಿರ್ವಾಹಕ ನಿರ್ದೇಶಕರು, ಸೆಂಟರ್ ಫಾರ್ ಸ್ಮಾರ್ಟ್ ಗೌರ್ವನೆನ್ಸ್ | ಸದಸ್ಯರು |
| 7 | ಮುಖ್ಯ ಪ್ರಧಾನ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿ |
| 8 | ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ಅಧಿಕಾರಿಗಳು | ವಿಶೇಷ ಆಹ್ವಾನಿತರು |

ಮೇಲ್ಕಂಡ ಸಲಹಾ ಸಮಿತಿ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನದ ಬಗ್ಗೆ ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.
14/6/2022
(ಪಿ.ಎನ್. ನಾಗರಾಜ್)
ಸರ್ಕಾರದ ಉಪ ಕಾರ್ಯದರ್ಶಿ-3(ಪ್ರ)
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಮುಖ್ಯ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, (ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ) ಬೆಂಗಳೂರು.
4. ಕಾರ್ಯ ನಿರ್ವಾಹಕ ನಿರ್ದೇಶಕರು, ಸೆಂಟರ್ ಫಾರ್ ಸ್ಮಾರ್ಟ್ ಗೌರ್ವೆನನ್ಸ್, ಬೆಂಗಳೂರು
5. ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

....5

7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
12. ನಿರ್ದೇಶಕರು, ಎಸ್.ಸಿ.ಪಿ/ಟಿ.ಎಸ್.ಪಿ ಕೋಶ, ಕಲ್ಯಾಣ ಕೇಂದ್ರ, ಸಮಾಜ ಕಲ್ಯಾಣ ಇಲಾಖೆ ಯುನಿಕ, ನೃಪತುಂಗ ರಸ್ತೆ, ಬೆಂಗಳೂರು
13. ಶಾಖಾ ರಕ್ಷಣಾ ಕಡತ/ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ:

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ
3. ನೋಡಲ್ ಏಜೆನ್ಸಿ, ಸಲಹೆಗಾರರು , ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಉಪ ಕಾರ್ಯದರ್ಶಿ-1,2 ಮತ್ತು 3 ಇವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ
5. ಸರ್ಕಾರದ ಅಧೀನ ಕಾರ್ಯದರ್ಶಿ-1, 2 & 3 ಸಮಾಜ ಕಲ್ಯಾಣ ಇಲಾಖೆ.